Rega No BG 155

Sri "SATYAVADI"
— DAILY —
MYSORE 4
46 th Year

Protect the cow

— శ్రీ —

ಸತ್ಯವಾದಿ
SATYAVADI

ಸ್ಥಾಪಕರು– ಅರಮನೆ ಸಿಂಪ್ಥೇದಾರ್ ಎಂ. ಎ. ಸುಬ್ಬರಾಯುರು [ಬಿಡಿ ಪ್ರತಿ 3 ಪೈ

17—1—1962

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಗೋಸಂರಕ್ಷಣೆ ಮಾಡಿ

ಗಗನ ಪ್ರವಾಸಿ ಫೆರ್ಮಾರ್ ಶೀತೋವ್‌ರ ತಂದೆ ಸ್ಪೇಸ್ ಪಾವ್ಲೊವಿಚ್ ತಾಯಿ ಅಲೆಕ್ಸಾಂದ್ರ ಅಭಿನಂದನಾ ಪತ್ರಗಳನ್ನು ಓದುತ್ತಿರುವರು

ವೇತನ ಇತ್ತಿಲ್ಲ !

ಪೂಣಿಯ ಸಲೂಜ ಆಸ್ಪತ್ರೆಯ ಹೆಣದ ಮನೆಯಲ್ಲಿ ಸುಮಾರು 30 ಹೆಣಕೊಳೆತ ವಾಸನೆ ಬಡಿಯುತ್ತಿವೆ ಹೆಣಗಳನ್ನು ಎತ್ತಿಹಾಕುವ ಕಂಟ್ರಾಕ್ಟುದಾರನ ಪಂಬಳ ಸರಿಯಾಗಿ ಕೊಡಲ್ಪಡಲಿಲ್ಲ ವೆಂದು ಆತನು ಮುಷ್ಕರ ಹಿಡಿದದ್ದೇ ಇದಕ್ಕೆ ಕಾರಣವಂತೆ.

ಚುನಾವಣೆ ಗುರುತು

ಬರುವ ಚುನಾವಣೆಯಲ್ಲಿ ಈರ್ವರು ವಹಿಳಾ ಉಮೇದುವಾರರು ನರಸಿಂಹ ಗಂಜೆನಲ್ಲಿ ಲೋಕಸಭೆ ಮತ್ತು ರಾಜ್ಯ ಸಭೆಗಳಿಗೆ ಸ್ಪರ್ಧಿಸುವರು. ಆ ಪೈಕಿ ಓರ್ವರು ತನ್ನ ಚುನಾವಣೆ ಗುರುತನ್ನು ಡಾಲ್ಡ ಡಬ್ಬ ಮತ್ತೊರ್ವರು ಸರ್ಜಲೈಟು ಪಾಬೂನು ಗುರುತು ಪಡೆದಿರುವರು

೦೦

ಉತ್ತರದಿಂದ ಜ|| ಮಹಮದ್ ಸೇಟರವರು, ಮೈಸೂರು ನಗರ ಕ್ಷೇತ್ರದಿಂದ ಶ್ರೀ ಎ ರೇಣುಕಾಂವರು ವಿಧಾನ ಸಭೆ ಚುನಾವಣೆಗೆ ನಾಮಪತ್ರ ಪಲ್ಲಿಸಿರುವರು.

ಹುಬ್ಬಳ್ಳಿಯಲ್ಲಿ ಮೊನ್ನೆ ನಂಬಿಕಸ್ಥ ಕಾಂಗ್ರೆಸಿಗರ ಸಭೆ ನಡೆದು ಕಾಂಗ್ರೆಸು ಹಾಗೂ ಜನತೆಯ ಹಿತದೃಷ್ಟಿಯಿಂದ ಕಾಂಗ್ರೆಸು ಬಿಟ್ಟು, ಅರ್ಹ ಉಮೇದು ವಾರಿಗೆ ಬೆಂಬಲಿಸಬೇಕೆಂದು ನಿರ್ಧರಿಸಿದರು

ಲೊಬೊಪ್ರಭು ಪ್ರಾಣ ಅಪಹರಣ ಯತ್ನ ?

ಮೊನ್ನೆ ರಾತ್ರಿ 10 ವರೆ ಗಂಟೆಯಲ್ಲಿ ಮಂಗಳೂರು ಕ್ಷೇತ್ರದಿಂದ ಲೋಕಸಭೆಗೆ ಸ್ವತಂತ್ರ ಪಕ್ಷದ ಪರವಾಗಿ ಸ್ಪರ್ಧಿಸಿರುವ ಶ್ರೀ ಜೆ ಎಂ ಲೋಬೋಪ್ರಭು ರವರ ಮನೆಗೆ ಓರ್ವ ಪ್ರವೇಶಿಸಿದನೆಂದೂ, ಆಗ ಅವರು ಕಿಟಿಕಿ ಬಾಗಿಲುಗಳನ್ನು ತೆಗೆದು ನಿದ್ರಿಸುತ್ತಿದ್ದರೆಂದೂ, ಆಗ ನಾಯಿಗಳು ಬೊಗಳಲು ಅವನು ಓಡಿದನೆಂದೂ ಡ್ರೈವರನು ಕರೆಯಿಕೊಳ್ಳಲು ಸುತ್ತ ಮುತ್ತಲಿರುವ ಜನರು ಅವನನ್ನು ಅಟ್ಟಿ ಕೊಂಡುಹೋಗಿ ಹಿಡಿದರೆಂದು ವಂದಿ ಅವನ ಬಳಿ ಮೆಣಸಿನಪುಡಿ ಪಾಕೂ ಚಾಕೂ ಇದ್ದಿತೆಂದೂ, ಅವರ ಪ್ರಾಣಾಪಹರಣಕ್ಕೆ ಅವನು ಬಂದಿದ್ದನೆಂದು ನಂಬಲಾಗಿದೆ ಎಂದೂ, ಅವನನ್ನು ಪೋಲೀಸರ ವಶಕ್ಕೆ ಕೊಡಲಾಗಿದೆ ಎಂದೂ ವರದಿಯಾಗಿದೆ

★

ರ ಸರ್ಕಾರಿ ಆರ್ಟ್ಸ್ ಕಾಲೇಜು ವಿದ್ಯಾರ್ಥಿಗಳು ಕಳೆದ 36 ದಿನಸಗಳಿಂದ ಹೂಡಿದ್ದ ಮುಷ್ಕರ ಈ ದಿನ ಮುಗಿಯಿತು. ಅವರ ಕುಂದುಕೊರತೆಗಳನ್ನು ಒಗಿಹರಿಸುವ ಭರವಸೆ ಸಿಕ್ಕಿದೆ

★

ಗುಂಡು ಹಾರಿಸಿದ ಸಂದರ್ಭದಲ್ಲಿ ಇಂಡೋನೇಷಿಯಾ ಹಾಗೂ ಹಾಲೆಂಡು ವಿಶ್ವಸಂಸ್ಥೆಗೆ ತಿಳಿಸಿವೆ

ವಿವಿಧ ವಿಷಯಗಳು

ಬಿದರೆಯಿಂದ ಬಂದಿರುವ ವರದಿಯ ಪ್ರಕಾರ ಚಿಂಕೋಡಿಯ ಪಟೇಲನ ಮನೆಗೆ ಕಳ್ಳರು ನುಗ್ಗಿ ಕೊಡಲಿಯಿಂದ ಆವರ ಮುಖಕ್ಕೆ ಹೊಡೆದು, ಅವರ ಹೆಂಡತಿಯನ್ನು ಬೆದರಿಸಿ ರೂ 12 ಸಾವಿರ ಬೆಲೆ ಬಾಳುವ ಪದಾರ್ಥ ಅಪಹರಿಸಿದರು

ಚುನಾವಣೆ ಮತ್ತಿತರ ಕಾರಣಗಳಿಗಾಗಿ ವಿಶ್ವವಿದ್ಯಾನಿಲಯದ ಪರೀಕ್ಷೆಗಳು ಮುಂದಕ್ಕೆ ಹೋಗಬೇಕೆಂಬ ಪ್ರಯತ್ನವನ್ನು ಬೆಂಗಳೂರಿನ ಕೆಲವು ಕಾಲೇಜಿನ ವಿದ್ಯಾರ್ಥಿ ನಾಯಕರು ವಿರೋಧಿಸಿ ಅ ರೀತಿ ಮಾಡದಿರುವಂತೆ ಸಂಡಿಕೇಟನ್ನು ಒತ್ತಾಯಮಾಡಿರುವರು ಈಗ ನಿಗದಿಯಾಗಿರುವಂತೆ ಪರೀಕ್ಷೆಗಳು ನಡೆಯಬೇಕೆಂದು ಅವರು ಒತ್ತಾಯ ಮಾಡಿರುವರು

ಲಕ್ನೋದಲ್ಲಿ ವಿಹಿಳಾ ಪಾಲಿಟೆಕ್ನಿಕ್ ಶಿಕ್ಷಣ ಸಂಸ್ಥೆ ಆರಂಭವಾಗಿರುವುದು

ರಾಜಕೋಟೆಯಲ್ಲಿ ಮೊನ್ನೆ ಒಹಿರಂಗ ಸಭೆಯಲ್ಲಿ ಮೊನ್ನೆ ಭಾರತ ಸರ್ಕಾರದ ಹಣಕಾಸಿನ ಮಂತ್ರಿ ಶ್ರೀ ಮೊರಾರ್ಜಿ ದೇಸಾಯರು ಭಾಷಣ ಮಾಡುತ್ತಾ, ಪ್ರಜಾಪ್ರಭುತ್ವದಲ್ಲಿ ಪದಾರ್ಥಗಳ ಮೇಲೆ ಹತೋಟಿ ಅಗತ್ಯ ಎಂದರು.

ಕಾಂಗ್ರೋ ಪಧಾನಿ ಅಡ್ಲೈ ವಿಶ್ವ ಸಂಸ್ಥೆಯೊಂದಿಗೆ ಮಾತುಕತೆ ನಡೆಸಲು ಅಮೆರಿಕಾಕ್ಕೆ ಭೇಟಿಕೊಡಲಿರುವರು

ಬರೋಡಾದಲ್ಲಿ ಮಂದ ಅಂಗಡಿಯೊಂದರಲ್ಲಿ ಅಗ್ನಿ ಅನಾಹುತವಾಗಿ ಓರ್ವ ವಹಿಳೆ ಹಾಗೂ ಮೂವರು ಮಕ್ಕಳು ಸೇರಿ ಐದು ಮಂದಿ ಮರಣಹೊಂದಿದರು.

ಕೆಲವು ಕೈಗಾರಿಕೆಗಳಲ್ಲಿ ಅಡಳಿತದಲ್ಲಿ ಕಾರ್ಮಿಕರು ಭಾಗವಹಿಸುವಿಕೆ ವಿಫಲವಾಗಿದೆ ಎಂದು ಭೂಪಾಲಿನಲ್ಲಿ ಕೈಗಾರಿಕಾ ಮಂತ್ರಿ ಶ್ರೀ ಕೆ ಸಿ. ರೆಡ್ಡಿ ತಿಳಿಸಿದ್ದಾರೆ.

ನಾಳೆಯ ಪಂಚಾಂಗ

ಅಸ್ಥಾನ ವಿದ್ವಾನ್ ವಿದ್ವಾ ದಂತಾಧಿಕಾರಿ
ದೈವಜ್ಞ ಶಿಖಾಮಣಿ
ಪಂಪಶ್ಯ ಪ್ಪಜೋಯಿಸರಿಂದ

18 ಶ್ರಯೋದಶಿ ಮೃಗಶಿರ

ಮುಷ್ಕರ

ಬೆಂಗಳೂರು ಕಾರ್ಪೊರೇಷನ್ ಮಿತಿಯಿಂದ 20 ಮೈಲುಗಳ ಉಚಿತ ಹೋಗಿ ಬರುವ ಪ್ರಯಾಣವನ್ನು ಪ್ರತಿಭಟಿಸಿ ಮುಂದಿನ ಸೋಮವಾರ 13 ರಿಂದ ಟ್ಯಾಕ್ಸಿಗಳ ಡ್ರೈವರುಗಳು ಮತ್ತು ಮಾಲೀಕರು ಮುಷ್ಕರ ಹೂಡುವರು.

★

ಬೆಂಗಳೂರಿನಲ್ಲಿರುವ ಮೈಸೂರು ಸಂಸ್ಥಾನದ ವೇರ್ ಹೌಸಿಂಗ್ ಕಾರ್ಪೊರೇಷನ್ನಿನ ಸಭಾ ವೇರ್ ಹೌಸ್‌ನ ಆರಂಭೋತ್ಸವ ಫಾಲಹಳ್ಳಿಯಲ್ಲಿರುವ ಶ್ರೀ ಶಾರದಾ ರೈಸ್‌ಮಿಲ್ ಆವರಣದಲ್ಲಿ ಈ ದಿನ ಬೆಳಿಗ್ಗೆ 10 ಗಂಟೆಗೆ ನಡೆಯಲಿರುವ ಟಾಗಿದೆ ಮೈಸೂರು ಸಂಸ್ಥಾನದ ವೇರ್ ಹೌಸಿಂಗ್ ಕಾರ್ಪೊರೇಷನ್ನಿನ ಅಧ್ಯಕ್ಷರಾದ ಶ್ರೀ ಕೆ ಮಲ್ಲಪ್ಪನವರು ಉದ್ಘಾಟನೆ ಮಾಡಲು ಮತ್ತು ಮೈಸೂರು ಸಂಸ್ಥಾನದ ವೇರ್ ಹೌಸಿಂಗ್ ಕಾರ್ಪೊರೇಷನ್ ಮ್ಯಾನೇಜಿಂಗ್ ಡೈರೆಕ್ಟರಾದ ಶ್ರೀ ಆರ್. ಭೂಣಯ್ಯನವರು ಅಧ್ಯಕ್ಷತೆ ವಹಿಸಲು ಒಪ್ಪಿದ್ದಾರೆ.

ಫಾಜಿಬಾದಿನ ಬಳಿ ಮಂಜೆರಾ ನದಿಯಲ್ಲಿ ದೋಣಿ ಮುಳುಗಿ 24 ಜನರ ಪೈಕಿ 6 ಜನ ಹೆಂಗಸರು ಮರಣಹೊಂದಿದರು

ಕಳೆದ ವರ್ಷ ಸೆಪ್ಟೆಂಬರು ಮತ್ತು ಡಿಸೆಂಬರಿನಲ್ಲಿ ಕಾಂಗೋನಲ್ಲಿ 14 ಭಾರತೀಯ ಸೈನಿಕರು ಮರಣಹೊಂದಿ 38 ಮಂದಿ ಗಾಯಗೊಂಡರು.

ವಿಶಾಖಪಟ್ಟಣದ ಬಂದರಿನಲ್ಲಿ ನಾಲ್ಕು ಹಡಗು ನಿಲ್ಲುವ ಸ್ಥಳದ ನಿರ್ಮಾಣವಾಗಿದೆ.

ಕೋಮುವಾರು ರಾಜಕೀಯದಲ್ಲಿ ಮಗ್ನರಾಗದಿರುವಂತೆ ಮಂತ್ರಿ ಶ್ರೀ ಟಿ. ಮರಿಯಪ್ಪನವರು ಹಾಸನದ ಕುರುಬರ ವಿದ್ಯಾರ್ಥಿನಿಲಯದಲ್ಲಿ ತಿಳಿಸಿದರು.

ಮೈಸೂರಿಗೆ ನಿನ್ನೆ ಪಿಎಸ್ಪಿ ಅಧ್ಯಕ್ಷ ಶ್ರೀ ಅಶೋಕ ಮೆಹತ ಆಗಮಿಸಿದಾಗ ಅವರಿಗೆ ಮೈಸೂರು ನಗರದಲ್ಲಿ ವೈಭವ ಸ್ವಾಗತ ಸಿಕ್ಕಿತು ಸಂಜೆ ಅವರು ಪ್ರಜಾ ಭವನ ಮೈದಾನದಲ್ಲಿ ಭಾಷಣಮಾಡಿ ಪಿಎಸ್ಪಿ ಉಮೇದುವಾರರಿಗೆ ಓಟುಕೊಡಬೇಕೆಂದು ಮನವಿಮಾಡಿದರು

ಮುಷ್ಕರದ 5 ನೆಯ ದಿನ

ಜಿ ಸಿ ಎ ಎಂ ವಿದ್ಯಾರ್ಥಿಗಳು ತಮ್ಮ ಮುಷ್ಕರದ 5 ನೆಯ ದಿನವಾದ ನಿನ್ನೆ ಕೂಡ ಶಾಂತರೀತಿಯಿಂದ ವರ್ತಿಸಿದರು. ಬೆಳಿಗ್ಗೆ 9 ಗಂಟೆಗೆ ಪ್ರಾರ್ಥನೆ ಆದ ನಂತರ ವಿದ್ಯಾರ್ಥಿ ಮುಖಂಡರು ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನುದ್ದೇಶಿಸಿ ಮಾನ್ಯ ಸರ್ಕಾರವು ವೈದ್ಯ ವಿದ್ಯಾರ್ಥಿಗಳನ್ನು ಸಮರ್ಥ ವೈದ್ಯರನ್ನಾಗಿ ಮಾಡಲು ಬೇಕಾದ ಸಲಕರಣೆ, ಸೌಲಭ್ಯ ಶಿಕ್ಷಣಗಳನ್ನು ನೀಡುವ ಯೋಜನೆಯನ್ನು ಮಾಡುತ್ತಿಲ್ಲವೆಂದೂ, ವಿದ್ಯಾರ್ಥಿ ಜೀವನದಲ್ಲಿ ಓದಿ, ಕಲಿತು ಅನುಭವಗಳನ್ನು ಪಡೆಯಬೇಕಾದ ತಮ್ಮ ಅಮೂಲ್ಯ ಸಮಯದಲ್ಲಿ ಅನಿವಾರ್ಯವಾಗಿ ಮುಷ್ಕರ ವನ್ನು ಮಾಡುವಂತೆ ಅವಕಾಶ ನೀಡಿದ ಮಾನ್ಯ ಸರ್ಕಾರದ ಧೋರಣೆಯನ್ನು ಕುರಿತು ಮಾತನಾಡಿದರು.

ಅನಂತರ ತಮ್ಮ ಈ ಕಾರ್ಯದಲ್ಲಿ ಜನತೆಯು ಸಹಕಾರ, ಸಹಾಯ, ಸಹಾನುಭೂತಿಗಳನ್ನು ಕೋರಿ ತಮಗೆ ಜಯ ದೊರಕಲೆಂದು ಶ್ರೀ ಧನ್ವಂತರಿಯನ್ನು ಕೋರಿದರು.

ಪೋಲೀಸರ ಸಭೆ

ಬೆಂಗಳೂರು ವಿಧಾನ ಸೌಧದ ಸಭಾಭವನದಲ್ಲಿ ನಿನ್ನೆ ಗೃಹಮಂತ್ರಿ ಶ್ರೀ ಹೆಚ್ ಎಂ. ಚನ್ನಬಸಪ್ಪನವರು ಪೋಲೀಸ ಅಧಿಕಾರಿಗಳ ಸಮ್ಮೇಳನದಲ್ಲಿ ಭಾಷಣಮಾಡಿದರು.

ವರದಿ ಪ್ರಕಟಣೆ ಇಲ್ಲ

ಗೋದಾವರಿ ಹಾಗೂ ಕೃಷ್ಣ ನದಿ ನೀರಿನ ಹಂಚಿಕೆಯ ಒಗ್ಗೆ ಗುಲ್ಹಾತಿ ಸಮಿತಿಯ ವರದಿ ಚುನಾವಣೆಗೆ ಮೊದಲು ಪ್ರಕಟವಾಗುವದಿಲ್ಲ.

ಗುಂಡು ಹಾರಿಸಿತು

ಪಶ್ಚಿಮ ಜರ್ಮನ್ನಿನ ದಕ್ಷಿಣದಲ್ಲಿ ಇಂಡೋನೇಷಿಯಾದ ವೋಟಾರು ಟಾರ್ಪೆಡೊ ಹಡಗುಗಳು ಡಚ್ಚಂ ಯುದ್ಧ ಹಡಗುಗಳು ಗುಂಡುಹಾರಿಸಿದವು.

ನಿರಾಕರಣೆ

ಪಾಕಿಸ್ತಾನ ವಶದಲ್ಲಿರುವ ಕಾಶ್ಮೀರದ ಭಾಗದಲ್ಲಿ ಸಾಲ್ಕು ಸಹಸ್ರ ಚದುರ ಮೈಲಿಗಳಷ್ಟು ಭೂ ಪ್ರದೇಶವನ್ನು ಚೀನಾ ಕೇಳಿಲ್ಲವೆಂದು ಕಥಾಚಿಯಲ್ಲಿರುವ ಚೀನಾ ರಾಯಭಾರಿ ಟಿಂಕ್ ಕಫೊ ಯು ತಿಳಿಸಿದ್ದಾರೆ.

SHAKTI SUDHA

A Superb Tonic

ಎಲ್ಲ ವಿಧದ ಆಯುರ್ವೇದ ಔಷಧಗಳಿಗೆ
ಅ ಶೋ ಕಾ ಫಾರ್ಮಸಿ
ಲ್ಯಾನ್ಸ್‌ಡೌನ್ ಬಜಾರ್ ಮೈಸೂರು

For Quality Printing
L. N. Press
Sivarampet, Mysore

ವುಡ್‌ಲ್ಯಾಂಡ್ಸ್ ವೈಭವ 6 ನೇ ವಾರ

ಜಬ್ ಪ್ಯಾರ್ ಕಿಸೀಸೆ ಹೋತಾಹೈ

ದೇವ್‌ಆನಂದ್, ಅಶಾ ಪಾರಿಖ್ ಮತ್ತಿರ ಪ್ರಖ್ಯಾತ ತಾರೆಯರು ಪಾತ್ರವಹಿಸಿರುವ

ಅತ್ಯಂತ ಹುಸಂಜನ ಹಿಂದಿ ಚಿತ್ರ [ದಿನವಹಿ 3 ಪ್ರದರ್ಶನಗಳು

ಆಪೆರಾ— ಯಶಸ್ವಿ 3 ನೇ ವಾರ

ನಾಗಾರ್ಜುನ (ಕನ್ನಡ)

ತಾರಾಗಣ— ರಾಜಕುಮಾರ್, ನಾಗಯ್ಯ, ವಂಚಲಕ್ಷ್ಮಿ, ಹರಿಣಿ, ನರಸಿಂಹರಾಜು ಕಾಂತಾ ರಾವ್, ರಾಜನಾಲ [ದಿನವಹಿ 3 ಆಟಗಳು]

ಪ್ರಯೋಗಶಾಲೆಯ ಕಾರ್ಯಕರ್ತೆ ಟಿ. ತ್ರಿವೆಣಿನಾರಾಯಣ ನಡೆಸುತ್ತಿರುವ ಈ ಎನ್‌ಸೆಫೆಲೋಸ್ಕೋಪ್ ಉಪಕರಣದ ತೆರೆಯ ಮೇಲೆ ಮನುಷ್ಯನ ಮತ್ತು ಪ್ರಾಣಿಗಳ ವಿದ್ಯುತ್ ಕಾರ್ಯಾಚರಣೆಗಳನ್ನು ಕಾಣಬಹುದು. ಇದನ್ನು ಸೋವಿಯತ್ ಒಕ್ಕೂಟದ ವಿಜ್ಞಾನಗಳ ಅಕಾಡೆಮಿಯ ಎಲೆಕ್ಟ್ರೋ ಫಿಸಿಯಲಾಜಿಕಲ್ ಪ್ರಯೋಗಶಾಲೆಯಲ್ಲಿ ಉಪಯೋಗಿಸಲಾಗುತ್ತಿದೆ

Help ' The Gorakshana '

ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

" ಗೋರಕ್ಷಣ " ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರದ ಏಕೈಕ ಕನ್ನಡ ಪತ್ರಿಕೆ

ಗೋರಕ್ಷಣ ಪತ್ರಿಕೆಗೆ ಸಹಾಯಧನ್ಯ ಮತ್ತು ಪ್ರಕಟಿಸಲು ಅನುಕೂಲವಾದ ಲೇಖನಗಳನ್ನೂ ವಾರ್ತೆಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ : ಗೋರಕ್ಷಣ ಆಫೀಸ್, ಚಾಮರಾಜಪುರಂ, ಮೈಸೂರು 4

Edited, Printed & Published by the Proprietor, Dharma Prachara Nivata M. S. Krishna Rao, at the Satyavadi Press, Chamarajapuram, Mysore 4.